ಇ) ಮಳೆಗಾಲದ ಅಂತ್ಯದ ವೇಳೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿ ರಸ್ತೆಯಯ ಯಥಾಸ್ಥಿತಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಯೋಚಿಸಬಹುದೆ?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ ರಸ್ತೆಗಳಿಗೆ ಹಾನಿ ಉಂಟಾಗಿದೆ.

ಆ) ಬಂದಿದೆ.

ಇ) ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿಗಾಗಿ ಹೆಚ್ಚುವರಿ ಅನುದಾನ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪಿ ಕಂಬಳದ ಬಳಿ ಚಿಕ್ಕ ಸೇತುವೆ

1919-ಶ್ರೀ ವಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪರ ಕಂಬಳದ ಬಳಿಯ ನದಿಗೆ ಚಿಕ್ಕ ಸೇತುವೆಯ ನಿರ್ಮಾಣದ ಅವಶ್ಯಕತೆಯ ಕುರಿತು ಸತತವಾಗಿ ಸಾರ್ವಜನಿಕರಿಂದ ಲೋಕೊಪಯೋಗಿ ಇಲಾಖೆಗೆ ಮನವಿ ಬಂದಿರುವುದ ನಿಜವಲ್ಲವೆ?

ಆ) ಈ ತುರ್ತು ಅವಶ್ಯಕತೆ ಕುರಿತು ಲೋಕೊಪಯೋಗಿ ಇಲಾಖೆ ಕೈಗೊಂಡು ಕ್ರಮಗಳೇನು? ವಿವರ ತಿಳಿಸುವುದು?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ನಿಜ, ಬಂದಿದೆ.

ಆ) ಸದರಿ ಕಾಮಗಾರಿಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಅನುದಾನ ದೊರೆತಲ್ಲಿ ಕ್ರಿಯಾಯೋಜನೆಯಲ್ಲಿ ಸೇರಿಸಲಾಗುವುದು.

ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳ ಬಗ್ಗೆ

1878- ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಆಡಿಯಲ್ಲಿರುವ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ರಸ್ತೆಗಳ ಸಂಖ್ಯೆ ಎಷ್ಟು?

ಆ) ಇವುಗಳ ನಿರ್ವಹಣೆಗಾಗಿ 1990-91ನೇ ಸಾಲಿನಲ್ಲಿ ಖರ್ಚಾಗಿರುವ ಹಣವೆಷ್ಟು?

ಇ) 1991-92ನೇ ಸಾಲಿನಲ್ಲಿ ಈ ರಸ್ತೆಗಳಿಗಾಗಿ ಖರ್ಚು ಮಾಡುಲುದ್ದೇಶಿಸಿರುವ ಮೊತ್ತ ಎಷ್ಟು ಹಾಗೂ ಈ ಹಣ ಸಾಕಾಗುವುದೇ?

ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿವರ ಕೆಳಕಂಡಂತಿದೆ :

1.	ರಾಷ್ಟ್ರೀಯ ಹೆದ್ದಾರಿ	1997 ಕಿ.ಮೀ.

ಮುಖ್ಯ ಜಿಲ್ಲಾ ರಸ್ತೆಗಳು 17,997 ಕಿ.ಮೀ.

ಆ) 1990-91ನೇ ಸಾಲಿಗೆ ನಿರ್ವಹಣೆಗೆ ಆಗಿರುವ ವೆಚ್ಚ ಕೆಳಕಂಡಂತಿದೆ:

1.ರಾಷ್ಟ್ರೀಯ ಹೆದ್ದಾರಿ : 883. 04 ಲಕ್ಷ ರೂ.

2. ರಾಜ್ಯ ಹೆದ್ದಾರಿ

3. ಮುಖ್ಯ ಜಿಲ್ಲಾ ರಸ್ತೆ : 4382.74 ಲಕ್ಷ ರೂ.

ಇ) 1991-92ನೇ ಸ್ಸಾಲಿನಲ್ಲಿ ರಾಜ್ಯದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಹಾಗೂ ಮುಖ್ಯ ಜಿಲ್ಲಾ ರಸ್ತೆಗಳ ನಿರ್ವಹಣೆಗೆ ಖರ್ಚು ಮಾಡಲು ಉದ್ದೇಶಿಸಿರುವ ಹಣ 4011 ಲಕ್ಷ ರೂ. ಗಳು. ಇದು ರಸ್ತೆ ಗಳನ್ನು ಒಳ್ಳೆಯ ಸ್ಥಿತಿಯಲ್ಲಿಡಲು ಸಾಕಾಗುವುದಿಲ್ಲ.

ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

1879-ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಖರ್ಚಾಗಿರುವ ಹಣ ಎಷ್ಟು ? (ಕಳೆದ ಮೂರು ವರ್ಷಗಳ ವಿವರ ಕೊಡುವುದು (ವರ್ಷವಾರು))

2) ಇದಕ್ಕಾಗಿ ಒದಗಿಸಿದ ಹಣವು ಸಾಕಾಗಿದೆಯೇ?

3) ವಿಶ್ವ ಬ್ಯಾಂಕಿನಿಂದ ಈ ಕಾರ್ಯ ಕ್ರಮಕ್ಕಾಗಿ ಸಾಲ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು):

ವರ್ಷ	*ಖರ್ಚಾಗಿರುವ ಹಣ*
1988-89	5,344.83 ಲಕ್ಷ ರೂ.
1989-90	5,101.03 ಲಕ್ಷ ರೂ.
1990-91	4,216.39 ಲಕ್ಷ ರೂ.
ಒಟ್ಟು	**14,662.30 ಲಕ್ಷ ರೂ.**

2) ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗೆ ಅನುಗುಣವಾಗಿ ಹಣವನ್ನು ಒದಗಿಸಲಾಗಿದೆ.

3) ಹೌದು.

ರಾಜ್ಯದಲ್ಲಿ ಪ್ರಾವಾಸೋದ್ಯಮ ಅಭಿವೃದ್ಧಿ

1902-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿ ಪ್ರವಾಸೋದ್ಯಮದ ಬಗ್ಗೆ ಸಮಗ್ರ ಯೋಜನೆಯನ್ನೇನಾದರೂ ಸಿದ್ಧಪಡಿಸಲಾಗಿರುವುದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ, ಪ್ರವಾಸೋದ್ಯಮ ಸಚಿವರು) :